
# ಅಶ್ವತ್ಥ

(1912 – 1994)



ಅಶ್ವತ್ಥ ಎಂಬ ಮೂರಕ್ಷರದಿಂದ ಸಾಹಿತ್ಯಲೋಕದಲ್ಲಿ ಗುರುತಿಸಿಕೊಂಡಿರುವ ಅಶ್ವತ್ಥ ನಾರಾಯಣ ಅವರು ಹುಟ್ಟಿದ್ದು ಮೈಸೂರಿನಲ್ಲಿ. ತಂದೆ ಸೋಮಯ್ಯ, ತಾಯಿ ಲಕ್ಷ್ಮಮ್ಮ.

ತಾಯಿಯ ಅಕಾಲ ಮರಣದಿಂದ ಅಶ್ವತ್ಥರು ಸಂಬಂಧಿಗಳ ಮನೆಯಲ್ಲಿ ಬೆಳೆದರು. ಮೈಸೂರು ಹಾಗೂ ಬೆಂಗಳೂರಿನಲ್ಲಿ ಅಧ್ಯಯನ ಮಾಡಿದರು. ಎಂಜನಿಯರಿಂಗ್ ಪದವಿಯ ಬಳಿಕ ಕೆಲಕಾಲ ಲೋಕೋಪಯೋಗಿ ಇಲಾಖೆಯಲ್ಲಿ ಗುತ್ತಿಗೆ ಕೆಲಸ ನಿರ್ವಹಿಸಿದರು. ಸಿಮ್ಲಾದ ಮಿಲಿಟರಿ ಎಂಜನಿಯರಿಂಗ್‌ನಲ್ಲೂ ಸೇವೆ ಸಲ್ಲಿಸಿದರು. ಈ ವೃತ್ತಿಗಳ ಬಳಿಕ ಅವರು ಅಧ್ಯಾಪಕರಾದರು. ಅಧ್ಯಾಪಕ ವೃತ್ತಿಯಿಂದ ಸ್ವಯಂ ನಿವೃತ್ತಿ ಪಡೆದು, ಮೈಸೂರಿನಲ್ಲಿ ನೆಲೆಸಿದರು.

'ಅಭಿನಯ ಜಗತ್ತು', 'ದೀಪಾವಳಿಗೆ', 'ಮಹಾವಿಜಯ', 'ಯದಾಯದಾಹಿ ಧರ್ಮಸ್ಯಃ', 'ದೂರದ ಕಾಶಿಯಲ್ಲಿ', 'ಬಾಳ ಹೊಳೆ', 'ಅಗ್ನಿಸಾಕ್ಷಿ', 'ಜಯಂತಿ', 'ನೋವು ನಲಿವು'– ಅವರ ಕೆಲವು ಕಥಾಸಂಗ್ರಹಗಳು. ಅವರು ಸುಮಾರು 180 ಕತೆಗಳನ್ನು ಬರೆದಿದ್ದಾರೆ. 'ಮುನಿಯನ ಮಾದರಿ', 'ಮರ್ಯಾದೆ ಮಹಲು', 'ಬರದ ಸಿರಿ', 'ಹಂಬಲ', 'ಅಜ್ಞಾತನ ನಂಜುಂಡಾಯಣ', 'ರಂಗನಾಯಕಿ' ಸೇರಿದಂತೆ ಅವರು ಅನೇಕ ಕಾದಂಬರಿಗಳನ್ನು ಬರೆದಿದ್ದಾರೆ. ನಾಟಕ, ಪ್ರಬಂಧ, ಖಂಡಕಾವ್ಯ ಪ್ರಕಾರಗಳಲ್ಲೂ ಅವರು ಕೆಲಸ ಮಾಡಿದ್ದಾರೆ. ಅಶ್ವತ್ಥರ ಕಾದಂಬರಿಗಳು ಸಿನಿಮಾ ಆಗಿವೆ.

ಕಾಣದಹಾಗೆ – ಸಣ್ಣದು ಪುಟ್ಟದು. ಈಗ ದೊಡ್ಡದು ಮಾಡ್ದ, ಸಿಕ್ಕಿಬಿದ್ದ ಅಷ್ಟೆ. ಕಳ್ಳನ ಹೆಂಡತಿ ಎಂದಿದ್ರೂ ಮುಂಡೆತಾನೆ. ಅವನ ಮನೆ ಹಾಳಾಗ! ಬಾಯಿಗೆ ಮಣ್ಣು ಬೀಳ!'

'ಅಲ್ಲಾ ಅವನ ಧೈರ್ಯನೋಡಿ. ಮೆಚ್ಚಬೇಕಾದದ್ದೇ. ಅವನಿಗೆ ದೈವದ ಭಯವೂ ಇಲ್ಲವಲ್ಲ!'

'ಮನುಷ್ಯನಿಗೆ ಆಸೆ ಬಲವಾದರೆ ನೋಡಿ. ದೈವದ ಭಯವೂ ಇಲ್ಲ, ದೆವ್ವದ ಭಯವೂ ಇಲ್ಲ. ಜನಗಳ ಮಾತಿರಲಿ.'

'ಯಾಕೆ ಹೀಗೆ ಮಾಡಿದ ಅಂತ... ಇದ್ದದ್ದರಲ್ಲಿ ತೃಪ್ತನಾಗಿರೋದು ಬಿಟ್ಟು.'

'ಅದೇ ಪಾಯಿಂಟು, ಅದನ್ನು ಹೇಳಲೂ ಆರನಲ್ಲ, ಮೂಗ ಬೇರೆ.'

'ಇನ್ನೇನ್ರೀ ಎಲ್ಲೋ ತಗೊಂಡು ಹೋಗಿ ಮಾರಿಕೊಂಡು ಕೇರಿಕೊಂಡು ಮಜಮಾಡೋದಕ್ಕೆ ಅಷ್ಟೆ.'

'ಪೆದ್ದಮುಂಡೇಮಗ. ಅವನಿಗೆ ಅದು ಸಾಧ್ಯವಾಗ್ತಾ ಇತ್ತೆ ಎಲ್ಲಾದರೂ? ಹಿಡಿದೇ ಹಿಡಿಯೋರು, ಎಲ್ಲಾದರೂ ಜೀರ್ಣಿಸಿಕೊಳ್ಳೋದಕ್ಕಾಗ್ತಾ ಇತ್ತೆ. ಥ್ಥ, ಎಂದಿಗೂ ಇಲ್ಲ'